**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ. ನಂ.188/2022

ಸಿಡಬ್ಲ್ಯೂ: 03 ಪಿಡಬ್ಲ್ಯೂ : 01

ಪ್ರಮಾಣವಚನ ಭೋಧಿಸಲಾಯಿತು. ದಿಃ 05.10.2024.

| | |
|---|---|
| ಹೆಸರು | : ಶ್ರೀ. ಬಸವರಾಜ |
| ತಂ/ಗಂ ಹೆಸರು | : ಶ್ರೀ. ಶಿವಲಿಂಗಪ್ಪ ಮಂಟಗಿ |
| ವಯಸ್ಸು | : 60 ವರ್ಷ |
| ಉದ್ಯೋಗ | : ಒಕ್ಕಲುತನ. |
| ವಾಸಸ್ಥಳ | : ಮಾದನಹಿಪ್ಪರಗಾ. |

**ಮುಖ್ಯ ವಿಚಾರಣೆಃ** ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ನಾನು ಆರೋಪಿಗಳನ್ನು ನೋಡಿರುವುದಿಲ್ಲ ಹಾಗೂ ನನಗೆ ಪರಿಚಯ ಇರುವುದಿಲ್ಲ. ನನಗೆ ಚಾಸಾ-1, 2 ಹಾಗೂ 4 ರಿಂದ 11 ರವರ ಪರಿಚಯ ಇರುವುದಿಲ್ಲ.

ಸಾಕ್ಷಿಗೆ ಜಪ್ತಿ ಪಂಚನಾಮೆ ತೋರಿಸುತಿದ್ದು, ಅದರಲ್ಲಿರುವ ಹೆಬ್ಬಟ್ಟಿನ ಸಹಿಯನ್ನು ನೋಡಿ ಅಲ್ಲಗಳೆಯುತ್ತಾರೆ. ನಾನು ಎಲ್ಲಿಯು ಹಬ್ಬಟ್ಟಿನ ಸಹಿ ಮಾಡಿಲ್ಲ, ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಾಹನಗಳನ್ನು ನನ್ನ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುವುದಿಲ್ಲ. ಉಳಿದಂತೆ ನನಗೆ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ವಾದ ಕೇಳಿ ದಾಖಲಾತಿಗಳನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ** ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ 30.10.2015 ರಂದು ಬೆಳಿಗ್ಗೆ 4.45 ರಿಂದ 6.30 ಗಂಟೆಯವರೆಗೂ ಪೊಲೀಸರು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ, ಆರೋಪಿಗಳ ಅಕ್ರಮವಾಗಿ ಮರಳನ್ನು ಕಳ್ಳತನ ಮಾಡಿ ಸಾಗಾಣಿಕೆ ಮಾಡಿದ ಆಪಾದನೆ ಮೇರೆಗೆ ಜಪ್ತಿ ಪಂಚನಾಮೆಯನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮಗಳ

ಸಮಕ್ಷಮ ಜೆಸಿಬಿ ಮತ್ತು ಲಾರಿಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಜಪ್ತಿಪಂಚನಾಮೆಯನ್ನು ಬರೆದಿದ್ದು, ಅದನ್ನು ನನಗೆ ಮತ್ತು ಚಾಸಾ-2 ರವರಿಗೆ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಜಪ್ತಿ ಪಂಚನಾಮೆಯಲ್ಲಿಯ ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಕೂಡಾ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿಗಳ ಪರ ವಕೀಲರಿಂದಃ

ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ಮಂಡಿಸಿರುತ್ತಾರೆ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ನ್ಯಾಯಾಲಯ, ಆಳಂದ.